**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/645/2023 ದಿನಾಂಕ: 01.12.2023
Comp. No.: 1245330

**ಸುತ್ತೋಲೆ**

**ವಿಷಯ:-** ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ "ಓದುವ ಬೆಳಕು" ಕಾರ್ಯಕ್ರಮದ ಅಂಗವಾಗಿ **ಡಿಸೆಂಬರ್-2023 ಮಾಹೆಯಲ್ಲಿ "ವಿಶೇಷ ಚೇತನ ಸ್ನೇಹಿ ಮಕ್ಕಳು/ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಮತ್ತು ಮಾನವ ಹಕ್ಕುಗಳನ್ನು ಅರಿಯೋಣ'** ಅಭಿಯಾನ ಆಯೋಜಿಸುವ ಕುರಿತು.

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ಮಕ್ಕಳು ಓದುವುದರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಅನುಷ್ಠಾನಿಸಲು ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಹಾಗೂ ನಿರಂತರತೆಯನ್ನು ಕಾಪಾಡುವ ಗುರಿಯನ್ನು ಹೊಂದಲಾಗಿದೆ. ಅರಿವು ಕೇಂದ್ರಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗಿರುತ್ತದೆ. ಹೀಗೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ, ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳಿಗೆ **ಡಿಸೆಂಬರ್-2023 ಮಾಹೆಯಲ್ಲಿ "ವಿಶೇಷ ಚೇತನ ಸ್ನೇಹಿ ಮಕ್ಕಳು/ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಮತ್ತು ಮಾನವ ಹಕ್ಕುಗಳನ್ನು ಅರಿಯೋಣ'** ಅಭಿಯಾನವನ್ನು ಆಯೋಜಿಸಲು ನಿರ್ಧರಿಸಿದೆ.

**<u>ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:</u>**

1. **<u>ಡಿಸೆಂಬರ್- 3 : ಅಂತರ ರಾಷ್ಟ್ರೀಯ ವಿಶೇಷ ಚೇತನರ ದಿನ</u>**

ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿ ವರ್ಷ ಡಿಸೆಂಬರ್ 3 ಅನ್ನು 'ಅಂತರ ರಾಷ್ಟ್ರೀಯ ವಿಶೇಷ ಚೇತನರ ದಿನ'ವನ್ನಾಗಿ ಘೋಷಿಸಿದೆ. ವಿಶೇಷ ಚೇತನರ ಹಕ್ಕುಗಳನ್ನು ಭದ್ರಪಡಿಸುವ ಪ್ರಾಮುಖ್ಯತೆ ಹಾಗೂ ಅವರು ಇತರರೊಂದಿಗೆ ಸಮಾಜದಲ್ಲಿ ಸಂಪೂರ್ಣವಾಗಿ, ಸಮಾನವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸಬಹುದು ಮತ್ತು ಅವರ ಜೀವನದ ಎಲ್ಲಾ ಅಂಶಗಳಲ್ಲಿ ಯಾವುದೇ ಅಡೆತಡೆಗಳನ್ನು ಎದುರಿಸುವುದಿಲ್ಲ ಎಂಬುದನ್ನು ಪ್ರತಿಯೊಂದು ಸರ್ಕಾರವು ಖಾತರಿಪಡಿಸಬೇಕಿದೆ. ಸರ್ಕಾರದ ಜೊತೆಗೆ ಸಮುದಾಯ, ಕುಟುಂಬ ಹಾಗೂ ಎಲ್ಲರೂ ಕೈ ಜೋಡಿಸಿ ವಿಶೇಷ ಚೇತನರ ಸಮಗ್ರ ಅಭಿವೃದ್ಧಿಗೆ ಸಹಕರಿಸುವುದು ಅಗತ್ಯವಾಗಿರುತ್ತದೆ. ಆ ನಿಟ್ಟಿನಲ್ಲಿ ಡಿಸೆಂಬರ್ 3 ರಿಂದ ಡಿಸೆಂಬರ್ 9 ರವರೆಗೆ ಒಂದು ವಾರದ ಕಾಲ ವಿಶೇಷ ಚೇತನರ ಹಕ್ಕುಗಳ ರಕ್ಷಣೆ ಕುರಿತಾಗಿ ಚಟುವಟಿಕೆಗಳನ್ನು ಅರಿವು ಕೇಂದ್ರಗಳಲ್ಲಿ ಆಯೋಜಿಸುವುದು.

**ಗ್ರಾಮ ಪಂಚಾಯತಿ 'ಅರಿವು ಕೇಂದ್ರ'ಗಳ ಮೇಲ್ವಿಚಾರಕರು**

- ಗ್ರಾಮೀಣ ಅರಿವು ಕೇಂದ್ರಗಳಲ್ಲಿ ವಿಶೇಷ ಚೇತನ ಮಕ್ಕಳು, ವ್ಯಕ್ತಿಗಳಿಗಾಗಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಮಕ್ಕಳಿಗೆ ಗ್ರಾಮ ಪುನರ್ವಸತಿ ಕಾರ್ಯಕರ್ತರ ಮೂಲಕ ಮಾಹಿತಿ ಒದಗಿಸುವುದು.
- ಮಕ್ಕಳಿಂದ ವಿಶೇಷ ಚೇತನರನ್ನು ಮುಖ್ಯವಾಹಿನಿಗೆ ತರುವ ಸಲುವಾಗಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು.
- ಚರ್ಚೆಯ ಪ್ರಮುಖ ಅಂಶಗಳನ್ನು ಹಿರಿಯ ವಿದ್ಯಾರ್ಥಿಗಳು ಪಟ್ಟಿ ಮಾಡಿ ಗ್ರಂಥಾಲಯದಲ್ಲಿ ಪ್ರಕಟಿಸುವುದು.
- ಮಕ್ಕಳು ತಮ್ಮ ಕುಟುಂಬ/ನೆರೆ-ಹೊರೆಯಲ್ಲಿರುವ ವಿಶೇಷ ಚೇತನರ ಅಭಿವೃದ್ಧಿಗಾಗಿ ಮುಂದಿನ ಹಾದಿಯ ಬಗ್ಗೆಅಭಿಪ್ರಾಯವನ್ನು ಪ್ರಬಂಧದ ಮೂಲಕ ತಿಳಿಸುವುದು.

2. **ಡಿಸೆಂಬರ್ - 10 : ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ದಿನ**

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 75 ನೇ ವಾರ್ಷಿಕೋತ್ಸವವನ್ನು ಈ ವರ್ಷ ನಾವು ಆಚರಿಸುತ್ತಿದ್ದೇವೆ. ಇದು ಪ್ರತಿಯೊಬ್ಬ ಮನುಷ್ಯನು ಕೆಲವು ಬೇರ್ಪಡಿಸಲಾಗದ ಹಕ್ಕುಗಳಿಗೆ ಅರ್ಹನಾಗಿರುತ್ತಾನೆ ಎಂಬುದನ್ನು ಘೋಷಿಸುತ್ತದೆ. 'ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯ' ಎಂಬ ಧ್ಯೇಯದೊಂದಿಗೆ ಪ್ರಸಕ್ತ ವರ್ಷ 'ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ದಿನ'ವನ್ನು ಆಚರಿಸಲಾಗುತ್ತಿದ್ದು, ಮಕ್ಕಳಿಗೆ ಎಳೆ ವಯಸ್ಸಿನಲ್ಲಿಯೇ ಮಾನವ ಹಕ್ಕುಗಳ ರಕ್ಷಣೆ ಮತ್ತು ಪ್ರಾಮುಖ್ಯತೆ ತಿಳಿಸಿಕೊಡುವ ಅಗತ್ಯವಿದೆ. ಮಾನವ ಹಕ್ಕುಗಳ ಉಲ್ಲಂಘನೆ, ಮಾನವ ಕಳ್ಳಸಾಗಾಣಿಕೆ ಮತ್ತು ಮಾರಾಟ, ಮಾನವ ಹಕ್ಕುಗಳ ಘನತೆ ಮತ್ತು ಸಮಾನತೆ ಸಾಧಿಸುವುದು ಇತ್ಯಾದಿ ಅಂಶಗಳ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದರಿಂದ ಹಕ್ಕುಗಳ ರಕ್ಷಣೆ ಸಾಧ್ಯವಾಗುತ್ತದೆ.

**ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:**
ಗ್ರಾಮ ಪಂಚಾಯತಿ 'ಅರಿವು ಕೇಂದ್ರ'ಗಳ ಮೇಲ್ವಿಚಾರಕರು

- ಗ್ರಾಮ ಪಂಚಾಯತಿ 'ಅರಿವು ಕೇಂದ್ರ'ಗಳಲ್ಲಿ ವಿಷಯ ತಜ್ಞರಿಂದ ಮಾನವ ಹಕ್ಕುಗಳ ಘನತೆ ಮತ್ತು ರಕ್ಷಣೆ ಬಗ್ಗೆ ವಿಶೇಷ ಉಪನ್ಯಾಸ ಆಯೋಜಿಸುವುದು
- ಮಾನವ ಹಕ್ಕುಗಳ ಮಹತ್ವದ ಬಗ್ಗೆ ಹಿರಿಯ ಮಕ್ಕಳು ಭಾಷಣ ಮಾಡುವುದನ್ನು ಕಿರಿಯ ಮಕ್ಕಳು ಆಲಿಸುವುದು
- ಕಿರಿಯರು ತಾವು ಕೇಳಿಸಿಕೊಂಡಿದ್ದರಲ್ಲಿ ಏನು ಅರ್ಥವಾಯಿತು ಎಂಬುದನ್ನು ಹಿರಿಯರಿಗೆ ಹೇಳುವ ಮೂಲಕ ಪರಸ್ಪರ ಸಂವಾದ ನಡೆಸುವುದು
- ಮಾನವ ಹಕ್ಕುಗಳ ರಕ್ಷಣೆ ಬಗ್ಗೆ ಮಕ್ಕಳು ಪ್ರಬಂಧ ರಚಿಸಲು ತಿಳಿಸುವುದು
- ಮಾನವ ಹಕ್ಕುಗಳ ರಕ್ಷಣೆ ಕುರಿತು ಚಿತ್ರ ರಚಿಸುವುದು
- ಉತ್ತಮ ಪ್ರಬಂಧ ರಚಿಸಿದ ಹಾಗೂ ಚಿತ್ರ ರಚಿಸಿದ ಮಕ್ಕಳ ಹೆಸರು, ಅವರು ರಚಿಸಿದ ಪ್ರಬಂಧ ಮತ್ತು ಚಿತ್ರವನ್ನು ಗ್ರಾಮ ಪಂಚಾಯತಿ ಅರಿವು ಕೇಂದ್ರಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಿ, ಪ್ರಶಂಸಿಸುವುದು

3. **ನನ್ನ ಕಲಿಕೆಯ ಬುಕ್‌ಲೆಟ್ :** 

**(ಬೇಕಾಗುವ ಸಾಮಗ್ರಿಗಳು:** ಸಣ್ಣ ಚೌಕಾಕಾರದ ಹಾಳೆಗಳು- ಬಣ್ಣದ ಪೆನ್ಸಿಲ್‌ಗಳು/ ಕ್ರೇಯಾನ್‌ಗಳು, ಕಾಗದದ ಟ್ಯಾಗ್‌ಗಳು/ ಸ್ಟ್ಯಾಪ್ಲರ್)

- ಪ್ರತಿ ಮಗುವಿಗೆ ಕನಿಷ್ಠ 3 ಹಾಳೆಗಳನ್ನು ನೀಡಿ ಮತ್ತು ವರ್ಷವಿಡೀ ಅವರು ಕಲಿತದ್ದನ್ನು ಬರೆಯಲು/ಚಿತ್ರಿಸಲು ಅವರನ್ನು ಪ್ರೋತ್ಸಾಹಿಸಿ. ಅವರು ಪದಗಳು/ವಾಕ್ಯಗಳನ್ನು

ಬರೆಯಲು ಆಯ್ಕೆ ಮಾಡಬಹುದು ಅಥವಾ ಇಷ್ಟಪಟ್ಟ ಕಥೆಯನ್ನು ಸಂಕ್ಷಿಪ್ತಗೊಳಿಸಬಹುದು(ವಿಶೇಷವಾಗಿ ಅವರು ಓದಿದ ಪುಸ್ತಕಗಳಿಂದ).

- ಬಣ್ಣದ ಪೆನ್ಸಿಲ್‌ಗಳು/ಕ್ರೇಯಾನ್‌ಗಳನ್ನು ಬಳಸಿ ಅದನ್ನು ಅಲಂಕರಿಸಲು ಅವರಿಗೆ ಹೇಳಿ.
- ಮಾಡಿದ ನಂತರ, ಅವರ ಹಾಳೆಗಳನ್ನು ಒಟ್ಟಿಗೆ ಟ್ಯಾಗ್/ ಸ್ಟೇಪಲ್ ಮಾಡಲು ಸಹಾಯ ಮಾಡಿ.
- ಈಗ ಪ್ರತಿಯೊಬ್ಬರೂ ತಮ್ಮದೇ ಆದ ಕಲಿಕೆಯ ಕಿರುಪುಸ್ತಕವನ್ನು ಹೊಂದಿದ್ದಾರೆ. .

4. **ಧನ್ಯವಾದ ಕಾರ್ಡ್ ರಚನೆ:** 

**(ಬೇಕಾಗುವ ಸಾಮಗ್ರಿಗಳು:** ಸಣ್ಣ ಚೌಕಾಕಾರದ ಹಾಳೆಗಳು- ಬಣ್ಣದ ಪೆನ್ಸಿಲ್‌ಗಳು/ ಕ್ರೇಯಾನ್‌ಗಳು)

- ಯಾರಿಗಾದರೂ ಹೇಳುವುದು/ಕೃತಜ್ಞತೆಯನ್ನು ಅನುಭವಿಸುವುದು ನಮಗೆ ಏಕೆ ಮುಖ್ಯವಾಗಿದೆ ಎಂಬುದನ್ನು ಮಕ್ಕಳೊಂದಿಗೆ ಸಂಕ್ಷಿಪ್ತವಾಗಿ ಹಂಚಿಕೊಳ್ಳಿ
- ಮಕ್ಕಳು ತಮ್ಮ ಆಯ್ಕೆಯ ಹಾಳೆ(1) ಮತ್ತು ಬಣ್ಣಗಳನ್ನು ಆಯ್ಕೆ ಮಾಡಿಕೊಳ್ಳಲಿ. ತಮ್ಮ ಗ್ರಂಥಾಲಯ ಮೇಲ್ವಿಚಾರಕರಿಗೆ ಧನ್ಯವಾದ ಪತ್ರಗಳನ್ನು ಬರೆಯಲು ಅವರನ್ನು ಪ್ರೋತ್ಸಾಹಿಸಿ
- ಅವರು ತಮ್ಮ ಸ್ನೇಹಿತರು/ಶಿಕ್ಷಕರು/ಪೋಷಕರು/ ಸಹೋದರ/ ಸಹೋದರಿಯರಿಗಾಗಿ ಈ ಕಾರ್ಡ್‌ಗಳನ್ನು ತಯಾರಿಸಬಹುದು

ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸದರಿ ಅಭಿಯಾನದ ಕುರಿತು ಪಂಚತಂತ್ರ 2.0 ತಂತ್ರಾಂಶದ ಈವೆಂಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್‌ನಲ್ಲಿ ಮಾಹಿತಿಯನ್ನು ಇಂದೀಕರಿಸಲು ತಿಳಿಸಿದೆ.

ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಮಕ್ಕಳಿಗೆ **"ವಿಶೇಷ ಚೇತನ ಸ್ನೇಹಿ ಮಕ್ಕಳು/ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಮತ್ತು ಮಾನವ ಹಕ್ಕುಗಳನ್ನು ಅರಿಯೋಣ'** ಅಭಿಯಾನವನ್ನು ಆಯೋಜಿಸುವುದರ ಮೂಲಕ ಕ್ರಮ ಕೈಗೊಳ್ಳುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.